**<u>ಸಾಕ್ಷಿಯನ್ನು ದಿನಾಂಕ 30-06-2023 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.**

**<u>ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎನ್.ಸಿ.ಹೆಚ್. ವಕೀಲರಿಂದಃ</u>**

ಈ ದಾವೆಯ ದಾವಾ ಸ್ವತ್ತು ಸ.ನಂ.66 ರಲ್ಲಿ ಇದೆ ಮತ್ತು ಅದರ ವಿಸ್ತೀರ್ಣ 3 ಎಕರೆ 15 ಗುಂಟೆ ಇದೆ. ಸಾಕ್ಷಿ ಪುನಹಃ ಇನ್ನೊಂದು ಸ.ನಂ.26 ಕ್ಕೆ ಸಂಬಂಧ ಪಟ್ಟ ಜಮೀನಿಗೂ ದಾವೆ ಹಾಕಿದ್ದೇನೆ ಎನ್ನುತ್ತಾರೆ. ನಮ್ಮ ತಂದೆಗೆ ಸೇರಿದ ಮನೆ ನಮ್ಮ ಊರಿನಲ್ಲಿ ಇದೆ ಎನ್ನುವುದು ಸರಿ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿ ಮನೆಯನ್ನು ಈ ದಾವೆಗೆ ಯಾಕೆ ಸೇರಿಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ಮನೆಗೆ ಸಂಬಂಧಿಸಿದಂತೆ ನಂತರ ದಾವೆ ಹಾಕಬೇಕೆಂದಿದ್ದೇನೆ ಎನ್ನುತ್ತಾರೆ.

ನಮ್ಮ ತಂದೆ ಬದುಕಿದ್ದಾಗ ನಾನು ಅವರಿಗೆ ದಾವಾ ಸ್ವತ್ತುಗಳಲ್ಲಿ ಪಾಲು ಕೊಡಬೇಕು ಎಂದು ಕೇಳಿ ವಕೀಲರ ಮೂಲಕ ನೋಟಿಸು ಕೊಟ್ಟಿದ್ದೆ ಎನ್ನುವುದು ಸರಿ. ಸದರಿ ನೋಟಿಸಿಗೆ ಈ ದಾವೆಯ ಪ್ರತಿವಾದಿಯರು ಉತ್ತರ ಕೊಟ್ಟಿದ್ದರು ಎಂದರೆ ಸರಿ. ನಮ್ಮ ತಂದೆಗೆ ನೋಟಿಸು ಕೊಡಲು ನಾನೇ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿದ್ದೆ. ಸಾಕ್ಷಿ ಸ್ವ-ಇಚ್ಛೆಯಿಂದ ನಮ್ಮ ತಂದೆಯವರೇ ದಾವೆ ಸಲ್ಲಿಸಿ ಆಸ್ತಿ ತೆಗೆದುಕೊಳ್ಳುವಂತೆ ಹೇಳಿದ್ದಾರೆ ಎನ್ನುತ್ತಾರೆ. ಸದರಿ ವಿಚಾರವನ್ನು ನನ್ನ ವಾದಪತ್ರದಲ್ಲಿ ಬರೆಸಿದ್ದೇನೆ.

ಈ ದಾವೆಯ ದಾವಾ ಸ್ವತ್ತುಗಳಲ್ಲಿ ಈಗ ಯಾರು ಸ್ವಾಧೀನಲ್ಲಿದ್ದಾರೆ ಎಂದು ಪ್ರಶ್ನಿಸಲಾಗಿ ಸಾಕ್ಷಿ 2 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾಳೆ ಎನ್ನುತ್ತಾರೆ. 2 ನೇ ಪ್ರತಿವಾದಿ ಎಷ್ಟು ವರ್ಷಗಳಿಂದ ದಾವಾ ಸ್ವತ್ತಿನಲ್ಲಿ ಸ್ವಾಧೀನಲ್ಲಿದ್ದಾಳೆ ಎಂಬ ಪ್ರಶ್ನೆಗೆ ಸಾಕ್ಷಿ 30 ವರ್ಷದಿಂದ ಸ್ವಾಧೀನಲ್ಲಿದ್ದಾಳೆ ಎನ್ನುತ್ತಾರೆ.

ನನ್ನ ತಂದೆಗೆ ಗಂಡು ಮಕ್ಕಳಿಲ್ಲ ಎಂಬ ಕಾರಣಕ್ಕೆ 2 ನೇ ಪ್ರತಿವಾದಿಗೆ ಮದುವೆ ಮಾಡಿದ ನಂತರ ಆಕೆಯ ಗಂಡ ಮುಸ್ತಾಫನನ್ನು ತಮ್ಮ ಮನೆಯಲ್ಲೆ ಇಟ್ಟುಕೊಂಡಿದ್ದರು ಎಂದರೆ ಸರಿ. ನನ್ನನ್ನು ನಿಡಗುಂದಾ ಗ್ರಾಮಕ್ಕೆ 30 ವರ್ಷಗಳ ಹಿಂದೆ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ನನ್ನ ತಂದೆ ಬದುಕಿದ್ದಾಗ 2 ನೇ ಪ್ರತಿವಾದಿ ಮತ್ತು ಆಕೆಯ ಗಂಡ ಅವರ ಸೇವೆ ಮಾಡಿದ್ದರು ಎಂದು ಸೂಚಿಸಿದರೆ ಸಾಕ್ಷಿ ನಾನು ಮತ್ತು ಪ್ರತಿವಾದಿಯರು ಮೂವರು ಸೇರಿ ಮಾಡಿದ್ದೇವೆ ಎನ್ನುತ್ತಾರೆ. ನನ್ನನ್ನು ಮತ್ತು 1 ನೇ ಪ್ರತಿವಾದಿಯನ್ನು ಮದುವೆ ಮಾಡಿಕೊಟ್ಟ ನಂತರ ನಾವಿಬ್ಬರು ನಮ್ಮ ನಮ್ಮ ಗಂಡನ ಮನೆಯಲ್ಲಿ ವಾಸವಿದ್ದೇವೆ ಮತ್ತು 2 ನೇ ಪ್ರತಿವಾದಿ ಹಾಗೂ ಆಕೆಯ ಗಂಡ ನಮ್ಮ ತಂದೆಯನ್ನು

ನೋಡಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ.

ದಾವಾ ಸ್ವತ್ತುಗಳನ್ನು ನಮ್ಮ ತಂದೆ ಸ್ವಂತಕ್ಕೆ ಖರೀದಿಸಿದ್ದರು ಎಂದರೆ ಸರಿ. ಸಾಕ್ಷಿ ಸ್ವ-ಇಚ್ಛೆಯಿಂದ ಸದರಿ ಆಸ್ತಿ ನನಗೆ ಮತ್ತು ಪ್ರತಿವಾದಿಯರಿಗೆ ಸಮನಾಗಿ ಸೇರಬೇಕು ಎನ್ನುತ್ತಾರೆ.

ನನ್ನ ತಂದೆಯನ್ನು ಅವರ ಕೊನೆ ದಿನಗಳಲ್ಲಿ 2 ನೇ ಪ್ರತಿವಾದಿ ಮತ್ತು ಆಕೆಯ ಗಂಡ ನೋಡಿಕೊಂಡಿದ್ದರಿಂದ ತಾನು ತೀರಿಕೊಂಡ ನಂತರ ದಾವಾ ಸ್ವತ್ತುಗಳು ಮತ್ತು ಮನೆ ನಂಬರ 1/26 ರ ಆಸ್ತಿಗಳು 2 ನೇ ಪ್ರತಿವಾದಿಗೆ ಸೇರಬೇಕು ಎಂದು ನನಗೆ ತಂದೆ ಬದುಕಿದ್ದಾಗಲೇ ದಿನಾಂಕ 15-11-2019 ರಂದು ಮರಣ ಶಾಶನ ಪತ್ರವನ್ನು ಬರೆದಿದ್ದರು ಎನ್ನುವುದು ಸರಿಯಲ್ಲ. ನನ್ನ ತಂದೆಗೆ ಸಹಿ ಮಾಡಲು ಬರುತ್ತಿರಲಿಲ್ಲ ಮತ್ತು ಅವರು ಹೆಬ್ಬೆಟ್ಟು ಹಚ್ಚುತಿದ್ದರು ಎಂದರೆ ಸರಿ. ನನ್ನ ತಂದೆ ಬರೆದಿರುವ ಮರಣ ಶಾಶನ ಪತ್ರದ ಬಗ್ಗೆ ನನಗೂ ಗೊತ್ತಿದೆ ಎನ್ನುವುದು ಸರಿಯಲ್ಲ.

ನಾನು ಕೊಟ್ಟ ನೋಟಿಸಿಗೆ ಕೊಟ್ಟ ಉತ್ತರ ಪತ್ರದಲ್ಲಿ ಪ್ರತಿವಾದಿಯರು ದಿನಾಂಕ 15-11-2019 ರಂದು ನಮ್ಮ ತಂದೆ ಬರೆದಿರುವ ಮರಣ ಶಾಶನ ಪತ್ರದ ಬಗ್ಗೆ ತಿಳಿಸಿದ್ದು ಸದರಿ ಉತ್ತರಕ್ಕೆ ನಾನು ಯಾವುದೇ ಪ್ರತಿಕ್ರಿಯೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಮರಣ ಶಾಶನ ಪತ್ರ ಬರೆದಿದ್ದಾರೆ ಎನ್ನುವುದು ಸುಳ್ಳು ಎನ್ನುತ್ತಾರೆ. ಪ್ರತಿವಾದಿಯರು ನನ್ನ ನೋಟಿಸಿಗೆ ಉತ್ತರ ಕೊಟ್ಟ ತಕ್ಷಣ ದಾವೆ ದಾಖಲಿಸದೆ ಒಂದು ವರ್ಷ ತಡವಾಗಿ ಈ ದಾವೆಯನ್ನು ಯಾವ ಉದ್ದೇಶಕ್ಕೆ ದಾಖಲಿಸಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿ ಪ್ರತಿವಾದಿಯರು ನನಗೆ ಪಾಲು ಕೊಡಬಹುದುದೆಂದು ಸುಮ್ಮನಿದ್ದೆ ಎನ್ನುತ್ತಾರೆ.

ನಮ್ಮ ತಂದೆ ಸ್ವ-ಖುಷಿಯಿಂದ ದಾವಾ ಸ್ವತ್ತುಗಳು ಮತ್ತು ಇನ್ನೊಂದು ಮನೆಯನ್ನು 2 ನೇ ಪ್ರತಿವಾದಿಗೆ ಮರಣ ಶಾಶನ ಪತ್ರದ ಮೂಲಕ ಸಾಕ್ಷಿದಾರರ ಸಮಕ್ಷಮ ಈಗಾಗಲೇ ಕೊಟ್ಟಿರುವುದರಿಂದ ದಾವಾ ಸ್ವತ್ತಿನಲ್ಲಿ ನನಗಾಗಲಿ ಅಥವಾ 1 ನೇ ಪ್ರತಿವಾದಿಗಾಗಲಿ ಯಾವುದೇ ರೀತಿ ಹಕ್ಕು ಅಧಿಕಾರ ಇಲ್ಲ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ ನಮ್ಮ ತಂದೆ ಬರೆದಿರುವ ಮರಣ ಶಾಶನ ಪತ್ರಕ್ಕೆ ವಿರೋಧ ವ್ಯಕ್ತಪಡಿಸುತ್ತಿಲ್ಲ ಎಂದೂ ಸೂಚಿಸಿದರೆ ಸಾಕ್ಷಿ ಆಕೆಯೇ ಈ ದಾವೆ ದಾಖಲಿಸುವಂತೆ ಮಾರ್ಗದರ್ಶನ ಮಾಡಿದ್ದಳು ಎನ್ನುತ್ತಾರೆ. 1 ನೇ ಪ್ರತಿವಾದಿಯನ್ನು ವಾದಿಯಾಗಿ ಸೇರಿಸದೆ ಪ್ರತಿವಾದಿಯಾಗಿ ಯಾಕೆ ಸೇರಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ನಮಗೆ ಮೂವರಿಗೂ ಆಸ್ತಿಯಲ್ಲಿ ಪಾಲು ಇರುವುದರಿಂದ ಆಕೆಯನ್ನು ಪ್ರತಿವಾದಿ ಮಾಡಿದ್ದೇನೆ ಎನ್ನುತ್ತಾರೆ. 1 ನೇ ಪ್ರತಿವಾದಿ ಮಾತು ಕೇಳಿ ಆಕೆಯನ್ನು ಈ ದಾವೆಯಲ್ಲಿ ಪ್ರತಿವಾದಿಯಾಗಿ ಸೇರಿಸಿದ್ದೇನೆ ಎನ್ನುತ್ತಾರೆ. 1 ನೇ ಪ್ರತಿವಾದಿ ಈ

ದಾವೆ ದಾಖಲಿಸುವಂತೆ ಮಾರ್ಗದರ್ಶನ ಮಾಡಿದ್ದಳು ನಾನು ವಾದ ಪತ್ರ ಬರೆಸುವಾಗ ವಕೀಲರಿಗೆ ಹೇಳಿಲ್ಲ.

ಸುಳ್ಳು ದಾವೆ ಮತ್ತು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**